ನಡೆಯುತ್ತಿತ್ತು.

ಚೈತ್ರಾ ಕೆಲವೊಮ್ಮೆ ಸ್ಟಿಕ್ ಬಿಡಿಸದೆ ನನ್ನ ಹೆಗಲ ಮೇಲೆ ಕೈಯಿಟ್ಟು ನಡೆಯುತ್ತಿದ್ದಳು. ಬ್ಯಾಂಕ್ ಒಳಗಡೆ ಐದು ಹೆಜ್ಜೆ ನಡೆದರೆ ಕೌಂಟರ್‌ಗಳ ನಡುವೆ ಕಿರು ಬಾಗಿಲಿದೆ. ಅದನ್ನು ತೆರೆದು ಎಡಬದಿಯಲ್ಲಿ ಹತ್ತು ಹೆಜ್ಜೆ ಹೋದರೆ ಮ್ಯಾನೇಜರ್ ಚೇಂಬರ್. ಎಡದಲ್ಲಿ ಸಾಲಾಗಿ ಕೌಂಟರ್‌ಗಳು, ಕ್ಯಾಷ್ ಕ್ಯಾಬಿನ್. ಅದಾದ ನಂತರ ವಾಷ್‌ರೂಮ್. ಅವಳು ಕೆಲವೊಮ್ಮೆ ಬಿಳಿ ಕೋಲು ಬಳಸದೇ ಓಡಾಡುವುದೂ ಇತ್ತು.

'ಚೂರೂಪಾರು ಕಾಣುತ್ತಾ? ಸ್ಟಿಕ್ ಬೇಕಿಲ್ವಾ?' ಅವಳು ಸಲೀಸಾಗಿ ಓಡಾಡುವುದನ್ನು ನೋಡಿ ಬೆರಗಿನಿಂದ ಕೇಳಿದ್ದೆ.

'ಸ್ಟಿಕ್ ಬೇಕ್ಸಾರ್. ಆದ್ರೆ ಅದ್ಕಿಂತ ಮುಟ್ಟಿ, ಕೇಳಿ, ಯೋಚಿಸಿ ತಿಳ್ಕೊಳ್ಳೋದೇ ಜಾಸ್ತಿ'

'ಹೌದಾ? ಹಾಗಾದ್ರೆ ನಮಗಿಂತ ಹೆಚ್ಚು ನಿನಗೇ ತಿಳೀತದೆ!'

ಚೈತ್ರಾ ನಕ್ಕು ನಿಮ್ಮ ಕೈ ಕೊಡಿ ಅಂದಳು. ನನ್ನ ಅಂಗೈಯನ್ನು ಹಿಡಿದು ನಿಮ್ಮ ಬಗ್ಗೆ ಹೇಳಲಾ ಎಂದು ಕೇಳಿದಳು. ಹು ಅಂದೆ.

'ನಿಮ್ಗೆ ಉಪಕಾರ ಬುದ್ಧಿ ಇದೆ. ಆದ್ರೆ ಜಂಬ ಜಾಸ್ತಿ' ಎಂದಳು.

'ನೀನು ಹಸ್ತಸಾಮುದ್ರಿಕ ಹೇಳಬಹುದು'

'ಅದೇ ಬೇರೆ. ನಿಮ್ಗೆ ಕಣ್ ಮೂಲಕ ಎಲ್ಲಾ ತಿಳಿಯತ್ತೆ. ನಮಗೆ ಮೂರನೇ ಕಣ್ಣು ಇರ್ತದೆ' ಎಂದು ನಕ್ಕಳು.

ಚೈತ್ರಾ ತೀರಾ ಬಡತನದಿಂದ ಬಂದವಳಲ್ಲ. ಹಿರಿಯರಿಂದ ಬಂದ ಎರಡೆಕರೆ ಹೊಲ ಇತ್ತು. ಆದರೆ, ಮಳೆ ಬಂದರೆ ಮಾತ್ರ ಬೆಳೆ. ಬೆಳೆ ಬರದ ಸಮಯದಲ್ಲಿ ತಂದೆ- ತಾಯಿ ಕೂಲಿನಾಲಿ ಮಾಡುತ್ತಿದ್ದರು. ಅಪ್ಪ- ಅಮ್ಮನಿಗೆ ಮದುವೆಯಾಗಿ ಬಹಳ ವರ್ಷಗಳ ನಂತರ ಹುಟ್ಟಿದವಳು ಚೈತ್ರಾ. ಅವಳು ಹುಟ್ಟಿದಾಗ ನೆರಳೇ ಇಲ್ಲದ ಬಿರು ಬೇಸಿಗೆಯ ಮಟಮಟ ಮಧ್ಯಾಹ್ನ. ಹುಟ್ಟಿದ ಮಗು ಬಿಸಿಲ ಝಳಕ್ಕೆ ಕಣ್ಣು ತೆರೆಯುತ್ತಿಲ್ಲವೆಂದು ಕಾದ ಅಪ್ಪ- ಅಮ್ಮನಿಗೆ ಆಘಾತ ಕಾದಿತ್ತು... ಮಗುವಿಗೆ ಬೆಳಕಿನ ಹಂಗೇ ಇರಲಿಲ್ಲ!

ಮಗುವಿಗಾಗಿ ಆಸೆ ಪಟ್ಟು, ಹರಕೆ ಹೊತ್ತು ಹುಟ್ಟಿದ ಮಗುವನ್ನು ಅಪ್ಪ ಕಣ್ಣೆತ್ತಿಯೂ ನೋಡಲಿಲ್ಲ. ಗಾರೆ ಕೆಲಸ ಮಾಡುತ್ತೇನೆಂದು ಯಾವುದೋ ಊರಿಗೆ ಹೊರಟು ಬಿಟ್ಟವರು ವರ್ಷಗಳು ಕಳೆದರೂ ಬರಲೇ ಇಲ್ಲ. ಅಮ್ಮ ಮಗುವನ್ನು ಸೊಂಟಕ್ಕೆ ಕಟ್ಟಿಕೊಂಡು ಹೊಲದ ಕೆಲಸ, ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಅಮ್ಮನ ಕಷ್ಟ ನೋಡಲಾಗದೆ ಮಗುವನ್ನು ಅಂಧರ ವಸತಿ ಶಾಲೆಗೆ ಸೇರಿಸಲು ಯಾರೋ ಹೇಳಿದರು. ಅಮ್ಮ ಬೇರೆ ದಾರಿ ಕಾಣದೆ, ಅವರಿವರನ್ನು ಕಾಡಿಬೇಡಿ ವಸತಿ ಶಾಲೆಗೆ ಸೇರಿಸಿದರು. ಚೈತ್ರಾ ಗ್ರಹಿಸುವುದರಲ್ಲಿ ಚುರುಕಾಗಿರುವುದನ್ನು ಕಂಡುಕೊಂಡ ವಸತಿ ಶಾಲೆಯ ಶಿಕ್ಷಕರು ಸರಿಯಾದ ಮಾರ್ಗದರ್ಶನ ಮಾಡಿದರು. ಎಸ್ಸೆಸ್ಸೆಲ್ಸಿ ಮುಗಿದ ನಂತರ ಮಗಳನ್ನು ಓದಿಸುವುದು ಅಮ್ಮನಿಗೆ ಇಷ್ಟವಿರಲಿಲ್ಲ. ಆ ಸಮಯದಲ್ಲಿ ಮನೆಗೆ ಮರಳಿ ಬಂದಿದ್ದ ಅಪ್ಪ ಮದುವೆಯ ಪ್ರಸ್ತಾಪ ಮಾಡಿದ್ದರು. ಸರಿಯಾದ ಗಂಡು ಸಿಗಲಿಲ್ಲ. ಚೈತ್ರಾ ಕಾಲೇಜಿಗೆ ಹೋಗುವ ತನ್ನ ಬಯಕೆಯನ್ನು ಅಂಧರ ಶಾಲೆಯ ಶಿಕ್ಷಕರಲ್ಲಿ ಹೇಳಿಕೊಂಡಳು. ಅವರೇ ಮುತುವರ್ಜಿಯಿಂದ ಉಚಿತ ಹಾಸ್ಟೆಲ್ ವ್ಯವಸ್ಥೆ ಮಾಡಿಸಿ, ಓದಿಗೆ ವ್ಯವಸ್ಥೆ ಮಾಡಿಕೊಟ್ಟರು.

ಕಾಲೇಜು ಸೇರಿದ ನಂತರ ಚೈತ್ರಾಳ ಬದುಕು ಬದಲಾಯಿತು. ಹಲವರ ಸ್ನೇಹ ದೊರಕಿತು. ಎಲ್ಲೆಂದರಲ್ಲಿ ಸುತ್ತಾಡಲು ಅವಕಾಶವಾಯಿತು. ದೃಷ್ಟಿಹೀನರ ಸಾಧನೆಗಳನ್ನು ಓದಿಕೊಂಡವಳಿಗೆ ಅವರಂತೆ ಆಗಬೇಕೆಂಬ ಇಚ್ಛೆ ಉತ್ಕಟವಾಯಿತು. ಅದರ ಮೊದಲ ಹೆಜ್ಜೆ ಎಂಬಂತೆ ಪದವಿಯಲ್ಲಿ ಒಳ್ಳೆಯ ಅಂಕ ಪಡೆದು, ಬ್ಯಾಂಕ್ ಪರೀಕ್ಷೆ ಪಾಸ್‌ಮಾಡಿ ನೌಕರಿಯನ್ನೂ ಗಿಟ್ಟಿಸಿದಳು. 'ಅದೆಲ್ಲಾ ಸರಿ. ಪರಿಚಯದವರು ಯಾರೂ ಇಲ್ಲದ ಬೆಂಗಳೂರಿಗೆ ಯಾಕೆ ಬಂದೆ?' ಕುತೂಹಲದಿಂದ ವಿಚಾರಿಸಿದ್ದೆ. 'ಓದ್ಬೇಕು. ಪೋಸ್ಟ್ ಗ್ರಾಜುಯೇಷನ್ ಮಾಡ್ಬೇಕು, ಸಾಧ್ಯ ಆದ್ರೆ ಸ್ಪರ್ಧಾತ್ಮಕ ಪರೀಕ್ಷೆ ಬರೀಬೇಕಂತ ಆಸೆ ಇಟ್ಕೊಂಡಿದ್ದೀನಿ. ಬೆಂಗ್ಳೂರಲ್ಲಿ ಅವಕಾಶ ಹೆಚ್ಚು ಅನ್ನಿಸ್ತು'. ಆಕೆ ದೇಶದ ಮೊದಲ ಅಂಧ ಐಎಎಸ್ ಆಫೀಸರ್ ಪ್ರಾಂಜಲ್ ಪಾಟೀಲ್ ಬಗ್ಗೆ ಹೇಳಿದಾಗ ಅವಳ ಉದ್ದೇಶ ತಿಳಿದು ಮೆಚ್ಚುಗೆಯಾಯಿತು.

ಚೈತ್ರಾ ಕೆಲಸಕ್ಕೆ ಸೇರಿ ವರ್ಷ ಕಳೆಯಿತು. ಟ್ರಾನ್ಸ್‌ಫರ್ ಸೀಸನ್ನಿನಲ್ಲಿ 'ಟ್ರಾನ್ಸ್‌ಫರ್ ಕೊಡಿಸಬಹುದೇ?'